## ಕರ್ನಾಟಕ ವಿಧಾನ ಪರಿಷತ್ತು

ಸದಸ್ಯರ ಹೆಸರು : ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು)

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1900 (2272)

ಉತ್ತರಿಸಬೇಕಾದ ದಿನಾಂಕ : 26.03.2026

ಉತ್ತರಿಸುವ ಸಚಿವರು : ಮಾನ್ಯ ಮುಖ್ಯಮಂತ್ರಿಯವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | KAT ಯಲ್ಲಿ ಕಳೆದ ಹಲವಾರು ವರ್ಷಗಳಿಂದ ಬಾಕಿ ಇರುವ ಪ್ರಕರಣಗಳ ಸಂಖ್ಯೆ ಎಷ್ಟು; (ವರ್ಷವಾರು ಮಾಹಿತಿ ಒದಗಿಸುವುದು) | ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿಯ ಮೂರು ಪೀಠಗಳಲ್ಲಿ ಬಾಕಿ ಇರುವ ಪ್ರಕರಣಗಳ ಮಾಹಿತಿಯನ್ನು ಅನುಬಂಧದಲ್ಲಿ ಒದಗಿಸಿದೆ. |
| (ಆ) | ಸದರಿ ಪ್ರಕರಣದಲ್ಲಿ ವಿವಿಧ ಹಂತದ ಸರ್ಕಾರಿ ನೌಕರರು ಮತ್ತು ಅಧಿಕಾರಿಗಳ ತಪ್ಪಿನಿಂದ ಪ್ರಕರಣಗಳ ಸಂಖ್ಯೆ ಈ ಪ್ರಮಾಣಕ್ಕೆ ಬೆಳೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಹಂತದಲ್ಲಿ ಅಥವಾ ಸಕ್ಷಮ ಪ್ರಾಧಿಕಾರದ ಹಂತದಲ್ಲಿ ನಿಯಮಗಳನ್ವಯ ಕೈಗೊಳ್ಳುವ ತೀರ್ಮಾನಗಳಿಂದ ಬಾಧಿತರಾಗುವ ಸರ್ಕಾರಿ ಅಧಿಕಾರಿ/ ನೌಕರರು ತಮ್ಮ ಸೇವಾ ವಿಚಾರಗಳಿಗೆ ಸಂಬಂಧಿಸಿದಂತೆ (ಉದಾ: ವರ್ಗಾವಣೆ, ಜೇಷ್ಠತೆ ಇತ್ಯಾದಿ) ಕರ್ನಾಟಕ ರಾಜ್ಯ ಆಡಳಿತ ನ್ಯಾಯಮಂಡಳಿ, ಕರ್ನಾಟಕ ಉಚ್ಛ ನ್ಯಾಯಾಲಯ ಹಾಗೂ ಭಾರತದ ಸರ್ವೋಚ್ಛ ನ್ಯಾಯಾಲಯಗಳ ಮೊರೆ ಹೋಗುವುದು ಸಾಮಾನ್ಯ ಪ್ರಕ್ರಿಯೆಯಾಗಿರುತ್ತದೆ. |
| (ಇ) | ಬಂದಿದ್ದಲ್ಲಿ, ತಪ್ಪು ನಿರ್ಧಾರಗಳನ್ನು ಕೈಗೊಂಡ ಅಧಿಕಾರಿಗಳ ವಿರುದ್ಧ ಸರ್ಕಾರ ಯಾವುದೇ ಕ್ರಮ ಕೈಗೊಳ್ಳದಿರುವುದರಿಂದ ಸದರಿ ಪ್ರಮಾಣದಲ್ಲಿ ಪ್ರಕರಣಗಳ ಸಂಖ್ಯೆ ಹೆಚ್ಚುತ್ತಿರುವುದು ಸರ್ಕಾರಕ್ಕೆ ಮನವರಿಕೆಯಾಗಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಯಾವ ರೀತಿ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ; (ವಿವರ ಒದಗಿಸುವುದು) | |
| (ಈ) | KAT ಯಿಂದ ವಕೀಲರನ್ನು ಹೊರಗಿರಿಸಿ ಕೇವಲ ಅರ್ಜಿದಾರರಿಂದ ಪ್ರಕರಣದ ವಿವರಣೆಯನ್ನು ಪಡೆಯುವಂತೆ ಸೂಕ್ತ ವ್ಯವಸ್ಥೆ ನಿರ್ಮಿಸಲು ಸರ್ಕಾರದ ಮುಂದಿರುವ ತೊಡಕುಗಳೇನು; ಸರ್ಕಾರಿ ನೌಕರರಿಗೆ ಮತ್ತು ಅಧಿಕಾರಿಗಳಿಗೆ ಸೇವಾ ನಿಯಮಗಳ ಕುರಿತು ಕಾಲಕಾಲಕ್ಕೆ ಇಲ್ಲಿಯವರೆಗೆ ಕಾರ್ಯ ನಿರ್ವಹಿಸಿರುವ KAT ಸದಸ್ಯ ಅಧಿಕಾರಿಯಿಂದ ಶಿಬಿರಗಳನ್ನು ಆಯೋಜಿಸಿ ಅಗತ್ಯ ಮಾಹಿತಿಗಳನ್ನು ಕಾಲಕಾಲಕ್ಕೆ ಒದಗಿಸುವಂತೆ ಅಗತ್ಯ ಮಾರ್ಗಸೂಚಿಗಳನ್ನು ಸರ್ಕಾರಿ ವ್ಯವಸ್ಥೆಯಲ್ಲಿ ರೂಪಿಸಲು ಯಾವ ಕ್ರಮಗಳನ್ನು ಕೈಗೊಳ್ಳುತ್ತಿದೆ; | ಆಡಳಿತ ನ್ಯಾಯಮಂಡಳಿಗಳು The Administrative Tribunals Act 1985 ಹಾಗೂ ಸದರಿ ಕಾಯ್ದೆಯ ಕಲಂ 35 ರಡಿಯಲ್ಲಿ ಕೇಂದ್ರ ಸರ್ಕಾರವು ರೂಪಿಸಿರುವ ನಿಯಮಗಳ ಅನ್ವಯ ಕಾರ್ಯ ನಿರ್ವಹಿಸುತ್ತಿವೆ. ಸದರಿ ಕಾಯ್ದೆ ಹಾಗೂ ಅದರಡಿ ರಚಿಸಲಾದ ನಿಯಮಗಳು ಕೇಂದ್ರ ಸರ್ಕಾರದ ಅಧೀನದಲ್ಲಿರುವುದರಿಂದ, ಅವುಗಳಿಗೆ ತಿದ್ದುಪಡಿ ಮಾಡುವ ಅಧಿಕಾರ ರಾಜ್ಯ ಸರ್ಕಾರದ ವ್ಯಾಪ್ತಿಗೆ ಒಳಪಡುವುದಿಲ್ಲ. |
| (ಉ) | ಮೇಲಿನ ಪ್ರಕರಣಗಳಲ್ಲಿ ಸರ್ಕಾರಿ ನೌಕರರ ಸಂಘ, ವಿವಿಧ ಸರ್ಕಾರಿ ಅಧಿಕಾರಿಗಳ ಸಂಘಗಳು ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತರಾಗುವುದಕ್ಕೆ ಅಗತ್ಯ ನಿಯಮಾವಳಿಗಳನ್ನು ಕಾನೂನು ಇಲಾಖೆ ರಚಿಸುವುದೇ? | |

**ಸಂಖ್ಯೆ: ಸಿಆಸುಇ 13 ಸೇನಿಎಫ್ 2026**

(ಸಿದ್ದರಾಮಯ್ಯ)
ಮುಖ್ಯಮಂತ್ರಿ.

ಅನುಬಂಧ

| STATEMENT SHOWING BENCH WISE/YEAR WISE PENDING OF CASES IN KSAT ENDING TO 11.03.2026 | | | | | | | |
|---|---|---|---|---|---|---|---|
| SL No | BENCHES | YEAR | Original Applications | Contempt Application | Review Applications | Miscellaneous Applications | Total |
| 1 | PRINCIPAL BENCH BANGALORE | 2013 | 3 | 0 | 0 | 0 | 3 |
| | | 2016 | 1 | 0 | 0 | 0 | 1 |
| | | 2018 | 1 | 0 | 0 | 0 | 1 |
| | | 2019 | 0 | 0 | 0 | 0 | 0 |
| | | 2020 | 0 | 4 | 0 | 0 | 4 |
| | | 2021 | 16 | 0 | 0 | 0 | 16 |
| | | 2022 | 36 | 2 | 0 | 0 | 38 |
| | | 2023 | 83 | 0 | 16 | 1 | 100 |
| | | 2024 | 664 | 45 | 3 | 0 | 712 |
| | | 2025 | 3369 | 284 | 75 | 2 | 3730 |
| | | 2026 | 1927 | 673 | 0 | 0 | 2600 |
| | | Total | 6100 | 1008 | 94 | 3 | 7205 |
| 2 | BELAGAVI BENCH | 2019 | 2 | 0 | 0 | 0 | 2 |
| | | 2020 | 11 | 0 | 0 | 0 | 11 |
| | | 2021 | 3 | 0 | -0 | 0 | 3 |
| | | 2022 | 27 | 1 | 0 | 0 | 28 |
| | | 2023 | 113 | 3 | 0 | 0 | 116 |
| | | 2024 | 255 | 38 | 0 | 0 | 293 |
| | | 2025 | 987 | 65 | 0 | 0 | 1052 |
| | | 2026 | 359 | 32 | 2 | 0 | 393 |
| | | Total | 1757 | 139 | 2 | 0 | 1898 |
| 3 | KALABRURAGI BENCH | 2019 | 3 | 10 | 0 | 0 | 13 |
| | | 2020 | 5 | 0 | 0 | 0 | 5 |
| | | 2021 | 37 | 14 | 0 | 0 | 51 |
| | | 2022 | 2 | 0 | 0 | 0 | 2 |
| | | 2023 | 21 | 4 | 0 | 0 | 25 |
| | | 2024 | 205 | 37 | 0 | 0 | 242 |
| | | 2025 | 514 | 432 | 2 | 0 | 948 |
| | | 2026 | 132 | 3 | 1 | 0 | 136 |
| | | Total | 919 | 500 | 3 | 0 | 1422 |
| | Grand Total | | 8776 | 1647 | 99 | 3 | 10525 |

REGISTRAR 11/3/26
KSAT PRINCIPAL BENCH
BANGALORE

11/3

11/3/26